ಶ್ರೀ ಎಂ. ಎಸ್. ಕೃಷ್ಣನ್ : ಪ್ರಕಾಶನಗರ (ರಾಜಾಜಿನಗರದ ತಿನೇ ಹಂತ) ಮತ್ತು ಜಬ್ಬಾರ ಬ್ಲಾಕಿನ ಕೆಲವು ಭಾಗ ನಗರಾಭಿವೃದ್ಧಿ ಮಂಡಲಿಯ ಅಧಿಕಾರದಲ್ಲಿದೆ ಎಂದೂ ಹೇಳಿದ್ದೀರಿ. ಎಷ್ಟು ವರ್ಷ ಗಳಿಂದ ಆ ರೀತಿ ಇದೆ, ಮತ್ತು ಅದಕ್ಕೆ ಕಾರಣವೇನು?

† ಶ್ರೀ ಬಿ. ಬಸವಲಿಂಗಪ್ಪ.—ನನಗೆ ಗೊತ್ತಿರುವ ಪ್ರಕಾರ ಪ್ರಕಾಶನಗರ (ರಾಜಾಜಿನಗರದ ತಿನೇ ಹಂತ) ಬೆಂಗಳೂರು ನಗರಸಭೆಯ ಅಧಿಕಾರ ವ್ಯಾಪ್ತಿಗೊಳಪಟ್ಟಿದೆ ಎಂದು ಅನಿಸುತ್ತದೆ. ಆದರೆ ಜಬ್ಬಾರ ಬ್ಲಾಕ್‌ನ ಎಲ್ಲ ಕೆಲಸಗಳು ಆಗಿಲ್ಲವೆಂಬ ಕಾರಣದಿಂದ ಇನ್ನೂ ಹಾಗೆಯೇ ಬಿಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಈ ಎರಡು ಪ್ರದೇಶಗಳು ಎಷ್ಟು ವರ್ಷದಿಂದ ನಗರಾಭಿವೃದ್ಧಿ ಮಂಡಲಿಯ ಅಧಿಕಾರ ವ್ಯಾಪ್ತಿಯಲ್ಲಿದೆ?

ಶ್ರೀ ಬಿ. ಬಸವಲಿಂಗಪ್ಪ.— ಬಹಳ ದಿವಸಗಳಿಂದ ಇರಬೇಕೆಂದು ಕಾಣುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಹನುಮಂತನಗರ ಮತ್ತು ಅಶೋಕನಗರ ಪ್ರದೇಶಗಳು ಕಳೆದ ೨೦ ವರ್ಷಗಳಿಂದ ಇನ್ನೂ ನಗರಾಭಿವೃದ್ಧಿ ಮಂಡಲಿಯ ಅಧಿಕಾರದಲ್ಲಿ ಇವೆ. ಇವುಗಳನ್ನು ಯಾವಾಗ ಬೆಂಗಳೂರು ನಗರ ಸಭೆಯ ಅಧಿಕಾರ ವ್ಯಾಪ್ತಿಗೊಳಪಡಿಸುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಈ ಒಂದೆರಡು ಪ್ರದೇಶಗಳನ್ನು ಬಿಟ್ಟರೆ ಉಳಿದ ಎಲ್ಲ ಭಾಗಗಳನ್ನು ಬೆಂಗಳೂರು ನಗರಸಭೆಯ ಅಧಿಕಾರ ವ್ಯಾಪ್ತಿಗೆ ಒಳಪಡಿಸಲು ಕ್ರಮಗಳನ್ನು ಕೈಕೊಳ್ಳಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಜಬ್ಬಾರ್ ಬ್ಲಾಕ್, ಚಿಕ್ಕಣ್ಣಪ್ಪ ಬ್ಲಾಕ್ ಕಳೆದ ೫೦ ವರ್ಷಗಳಿಂದಲೂ ಸ್ಲಮ್ ಪ್ರದೇಶಗಳಾಗಿಯೇ ಉಳಿದಿವೆ. ಬಡವರು ಇರುವ ಕಡೆಗಳಲ್ಲಿ ಎಲ್ಲ ಅನುಕೂಲ ಗಳನ್ನು ಮಾಡಿಕೊಡುತ್ತೇವೆಂದು ಹೇಳುವ ಸರ್ಕಾರ, ಈ ಪ್ರದೇಶಗಳಿಗೂ ಸಹ ಎಲ್ಲ ಪೌರಸೌಲಭ್ಯಗಳನ್ನೂ ಒದಗಿಸುವುದಕ್ಕೆ ಆದಷ್ಟು ಜಾಗ್ರತೆ ಆರ್ಡರ್ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಜಬ್ಬಾರ್ ಬ್ಲಾಕಿನ ಸಮಸ್ಯೆ ನನಗೆ ವೈಯಕ್ತಿವಾಗಿ ಗೊತ್ತು ಮತ್ತು ಮಂತ್ರಿಯಾದ ಮೇಲೂ ಗೊತ್ತಾಗಿದೆ. ಈ ಪ್ರದೇಶಕ್ಕೆ ಎಲ್ಲ ಸೌಲಭ್ಯಗಳನ್ನು ಒದಗಿಸಿ ನಗರಸಭೆಯ ಅಧಿಕಾರವ್ಯಾಪ್ತಿಗೆ ಒಳಪಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸಲಹೆ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— (ಅ) ಪ್ರಶ್ನೆಗೆ ಉತ್ತರವಾಗಿ "ಬಂದಿಲ್ಲ" ಎಂದು ಹೇಳಿದ್ದೀರಿ. ತಾವೇ ನಾದರು ಆ ಜಾಗಕ್ಕೆ ಬಂದು ನೋಡಿದ್ದೀರಾ? ಏತಕ್ಕೋಸ್ಕರ ಆ ರೀತಿ ಉತ್ತರ ಕೊಟ್ಟಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕರೆದರೆ ನಾನು ಅವರ ಜೊತೆಯಲ್ಲಿ ಆ ಪ್ರದೇಶಕ್ಕೆ ಬರುವುದಕ್ಕೆ ಸಿದ್ಧನಿದ್ದೇನೆ. ನಾನು ಬಡ್ಜೆಟ್ ಅಧಿವೇಶನದಲ್ಲಿಯೇ ಹೇಳಿದ್ದೇನೆ. ಈ ಭಾಗಗಳಿಗೆ ಎಲ್ಲ ಅನುಕೂಲಗಳನ್ನು ಒದಗಿಸಲು ಸಾಕಷ್ಟು ಹಣವನ್ನು ಒದಗಿಸಿದ್ದೇವೆಂದು. ಅದರಂತೆ ನಾವು ಎಲ್ಲ ಅನುಕೂಲ ಗಳನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.— ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಈ ಭಾಗಗಳಿಗೆ ಒದಗಿಸಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ.—ಒಟ್ಟು ೩೫ ಹಳ್ಳಿಗಳಿಗೆ ಸೇರಿದಂತೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ.

IMPROVEMENT OF SUGARCANE AYACUT ROADS

134 SRI B. SATHYANARAYANA SINGH (Hospet).—

Will the Minister for Public Works and Electricity be pleased to state :—

(a) whether it is a fact that the amount collected as sugarcane Cess was utilised for the formation, improvement and maintenance of sugarcane ayacut roads ;

(SRI B. SATHYANARAYANA SINGH)

(*b*) whether it is a fact that the Purchase Tax which is now collected is being diverted entirely to general funds without setting apart any portion for the formation, improvement and maintenance of sugarcane ayacut roads ;

(*c*) whether it has come to the notice of the Government that ryots on sugarcane ayacut area are suffering a lot in the absence of improvement and maintenance of sugarcane ayacut roads and also for absence of such roads ;

(*d*) whether the Government propose to set apart 50 per cent Purchase Tax collected from the management for the formation, improvement and maintenance of sugarcane ayacut roads in that factory area ;

(*e*) if not, the reasons for the same ?

SRI H. M. CHANNABASAPPA (Minister for Public Works):—

(*a*) Yes. Under Section 12 of the Mysore Sugarcane Cess Act, 1958 when it was in force, the proceeds of the cess were required to be expended for the purposes of.—

(i) the development and improvement of cultivation, growth and marketing of sugarcane and other irrigated crops, including research for such development and improvement.

(ii) the development of sugar industry in the State ;

(iii) the improvement of health, encouragement of technical education and development of communications in the notified areas in which sugarcane is grown for supply to the notified factories ;

(iv) meeting the expenses in connection with the administration of the State Sugarcane Cess Fund and the functioning of the Advisory Committees ; and

(v) such other prescribed purpose. A portion of the cess collections was accordingly utilised for development of communications in the cane growing areas.

(*b*) From 1st October 1961, sugarcane is subjected to Purchase Tax. The Mysore Sales Tax Act, 1957 does not provide for earmarking of the tax collected under it for any specific purpose. The Purchase Tax on sugarcane is credited to the general revenues of the State.

(*c*) Yes.

(*d*) and (*e*) No. Sales Tax is levied on several articles and we cannot earmark taxes for particular purposes. The construction and maintenance of sugarcane roads cannot get priority over social services and basic amenities to be provided in rural areas.

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಕಬ್ಬನ್ನು ಬೆಳೆಯುವ ಪ್ರದೇಶಗಳಲ್ಲಿ ಹೊಸ ರಸ್ತೆಗಳನ್ನು ಮಾಡಿಸುವುದಕ್ಕೆ ಮತ್ತು ಇರುವ ರಸ್ತೆಗಳನ್ನು ಸುಧಾರಿಸುವುದಕ್ಕೆ ಏನಾದರು ಕ್ರಮ ತೆಗೆದು ಕೊಂಡಿದ್ದಿರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ :—ವಿಶೇಷ ಕ್ರಮಗಳನ್ನು ಇಟ್ಟುಕೊಂಡಿಲ್ಲ. ಸಾಧಾರಣ ಕ್ರಮಗಳನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಈ ಕಬ್ಬು ಬೆಳೆಯುವ ಪ್ರದೇಶಗಳಿಂದ ಸರ್ಕಾರಕ್ಕೆ ವಿಶೇಷ ಆದಾಯ ಬರುತ್ತಿರುವುದರಿಂದ, ಅಲ್ಲಿಯ ರಸ್ತೆಗಳನ್ನು ಸುಧಾರಿಸುವುದಕ್ಕೆ ವಿಶೇಷ ಯೋಜನೆಯನ್ನು ಏನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಇವೊತ್ತು ಬೆಳಿಗ್ಗೆ ನಡೆದ ಮೀಟಿಂಗ್‌ನಲ್ಲಿ ಮಾನ್ಯ ಸದಸ್ಯರು ಸಹ ಇದ್ದರು. ವಿಶೇಷ ಕ್ರಮ ಏನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ವಿಷಯ ವಿನಿಮಯ ಮಾಡಿ ಒಂದು ತೀರ್ಮಾನಕ್ಕೆ ಬಂದಿರತಕ್ಕ ಅಂಶ ತಮಗೆ ಗೊತ್ತು.

ಶ್ರೀ ವಿ. ಮಸಿಯಪ್ಪ :—ಕಬ್ಬಿನ ಬೆಳೆಯ ಪ್ರದೇಶಗಳಿಗೆ ರಸ್ತೆಗಳನ್ನು ಒದಗಿಸುವುದು ಸಮಾಜ ವಾದಕ್ಕೆ ವಿರುದ್ಧವಾದ ನೀತಿ ಎಂದು ಸರ್ಕಾರ ಭಾವನೆ ಮಾಡಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ದೇಶದಲ್ಲಿ ಯಾರಿಗೆ ಬಹಳ ಕಡಿಮೆ ಅನುಕೂಲಗಳಿವೆಯೋ ಅವರಿಗೆ ಅನುಕೂಲಗಳನ್ನು ಒದಗಿಸಲು ಮೊದಲನೆಯ ಪ್ರಾಧಾನ್ಯತೆ ಕೊಡಬೇಕೆಂಬುದು ಸರ್ಕಾರದ ನೀತಿಯಾಗಿದೆ. ಹೆಚ್ಚಿನ ಅನುಕೂಲಗಳಂಬೇಕು ಎಂದು ಕೇಳುವವವರು ಹೆಚ್ಚು ವರಮಾನ ಕೊಡಬೇಕಾದ್ದು ನ್ಯಾಯ ಎಂದು ತಿಳಿದುಕೊಳ್ಳಬೇಕು.

ಶ್ರೀ ವಿ. ಮಸಿಯಪ್ಪ :—ಕಬ್ಬಿನಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಸಕ್ಕರೆ ಕಾರ್ಖಾನೆಗಳು ಕೊಡುತ್ತಿರುವ ಆದಾಯಕ್ಕಿಂತಲೂ ಹೆಚ್ಚಿನ ಆದಾಯ ಬರುವ ಇತರೇ ಕ್ಷೇತ್ರಗಳು ಸಹ ಇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಸೆಸ್ ಕಲೆಕ್ಟ್ ಮಾಡುತ್ತಿರುವುದರಿಂದ ಆ ಭಾಗದ ರಸ್ತೆಗಳನ್ನು ರಿಪೇರಿ ಮಾಡಿಸಲು ವಿಶೇಷ ವ್ಯವಸ್ಥೆ ಏನಾದರೂ ಇದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ವಿಶೇಷ ಮೇನ್‌ಟೆನೆನ್ಸ್ ಇಲ್ಲ ; ಸಾಮಾನ್ಯ ಮೇನ್‌ಟೆನೆನ್ಸ್ ಮಾಡುತ್ತಿದ್ದೇವೆ.

ULLAL–MANI ROAD

216.—SRI B.V. KAKKILAYA (Buntwal).—

Will the Minister for Public Works and Electricity be pleased to state.—

(*a*) when was the Ullal–Mani road on the South Bank of Netravathi river sanctioned and the estimated cost and amounts allotted for this road.

(*b*) the amount spent each year on this road up to the end of the financial year 1971-72,

(*c*) the progress made up to end of 1971–72 and the extent of work that remains yet to be done.